# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **409(429)** |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 19.08.2026 |
| ಉತ್ತರಿಸುವ ಸಚಿವರು | : | ಮಾನ್ಯ ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಸಾರ್ವಜನಿಕರಿಗೆ/ರೈತರಿಗೆ ಹೊಸ ಎಲ್‌ಪಿಜಿ (LPG) ಗ್ಯಾಸ್ ಸಂಪರ್ಕ ನೀಡುವುದನ್ನು ಸ್ಥಗಿತಗೊಳಿಸಲಾಗಿದೆಯೇ; ಸ್ಥಗಿತಗೊಳಿಸಿದ್ದರೆ, ಕಳೆದ ಎಷ್ಟು ತಿಂಗಳುಗಳಿಂದ ಹೊಸ ಸಂಪರ್ಕಗಳನ್ನು ನೀಡಲಾಗುತ್ತಿಲ್ಲ; | IOC, BPC, HPC ತೈಲ ಕಂಪನಿಗಳಲ್ಲಿ ಏಪ್ರಿಲ್-2026 ರಿಂದ ಜುಲೈ-2026ರ ಮಾಹೆಯವರೆಗೆ ಪ್ರಸ್ತುತ ಚಾಲ್ತಿಯಲ್ಲಿರುವ ಎಲ್‌ಪಿಜಿ ಗ್ರಾಹಕರಿಗೆ ಒಟ್ಟು 36.62ಲಕ್ಷ ಸಿಲಿಂಡರ್‌ಗಳನ್ನು ಸರಬರಾಜು ಮಾಡಲಾಗಿದ್ದು, ಆದರೆ ಏಪ್ರಿಲ್-2026ರ ಮಾಹೆಯಿಂದ ಮಧ್ಯಪ್ರಾಚ್ಯದ ಯುದ್ಧದ ಪರಿಣಾಮವಾಗಿ ಏಪ್ರಿಲ್-2026 ರಿಂದ ಹೊಸ ಸಂಪರ್ಕ ನೀಡುವ ಪ್ರಕ್ರಿಯೆ ಸ್ಥಗಿತವಾದ ಹಿನ್ನೆಲೆಯಲ್ಲಿ ಅಂತಹ ಗ್ರಾಹಕರಿಗೆ ಗ್ಯಾಸ್ ಏಜೆನ್ಸಿಗಳ ಮುಖಾಂತರ 05 kg Free Trade LPG (FTL)ಯನ್ನು ಖರೀದಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. |
| ಆ | ಸಾರ್ವಜನಿಕರು ಹಾಗೂ ಗೃಹಿಣಿಯರು ಹೊಸ ಗ್ಯಾಸ್ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸಿದ್ದರೂ ಸಹ ಸಂಪರ್ಕ ನೀಡದಿರಲು ಅಥವಾ ಪ್ರಕ್ರಿಯೆ ವಿಳಂಬವಾಗಲು ಕಾರಣಗಳೇನು; | IOC, BPC, HPC ತೈಲ ಕಂಪನಿಗಳಲ್ಲಿ ಮಧ್ಯಪ್ರಾಚ್ಯದ ಯುದ್ಧದ ಸಂದರ್ಭದಲ್ಲಿ ಪ್ರಸ್ತುತ ಇರುವ ಗ್ರಾಹಕರಿಗೆ ಆದ್ಯತೆ ಮೇಲೆ ಯಾವುದೇ ರೀತಿ ಅನಾನುಕೂಲವಾಗದಂತೆ ಅನಿಲ ಸಿಲಿಂಡರ್ ಸರಬರಾಜು ಮಾಡುವಲ್ಲಿ ಹೊಸ ಸಂಪರ್ಕಗಳನ್ನು ಒದಗಿಸಲು ವಿಳಂಬ ಉಂಟಾಗಿರುತ್ತದೆ. ಪರಿಸ್ಥಿತಿ ಸಂಪೂರ್ಣ ಹತೋಟಿಗೆ ಬಂದ ಮೇಲೆ ಸ್ಥಗಿತಗೊಂಡಿರುವ ಹೊಸ ಸಂಪರ್ಕಗಳನ್ನು ನೀಡುವ ಪ್ರಕ್ರಿಯೆಯನ್ನು ಪ್ರಾರಂಭಿಸಿ ಗ್ರಾಹಕರಿಗೆ ಸರಬರಾಜು ಮಾಡಲಾಗುತ್ತದೆ. ಆದಾಗ್ಯೂ ಅಂತಹವರು ತುರ್ತು ಅವಶ್ಯಕತೆ ಇದ್ದಲ್ಲಿ ಗ್ಯಾಸ್ ಏಜೆನ್ಸಿ ಮುಖಾಂತರ 05 kg Free Trade LPG (FTL)ಯನ್ನು ಖರೀದಿಸಲು ಅವಕಾಶ ಮಾಡಿಕೊಡಲಾಗಿರುತ್ತದೆ. |

| | | |
|---|---|---|
| ಇ | ಪ್ರಸ್ತುತ ರಾಜ್ಯಾದ್ಯಂತ ತೈಲ ಕಂಪನಿಗಳಲ್ಲಿ (IOCL, BPCL, HPCL) ಹಾಗೂ ಸಾರ್ವಜನಿಕ ಪಡಿತರ/ಗ್ಯಾಸ್ ಏಜೆನ್ಸಿಗಳಲ್ಲಿ ಹೊಸ ಗ್ಯಾಸ್ ಸಂಪರ್ಕಗಾಗಿ ಸಲ್ಲಿಕೆಯಾಗಿ ಬಾಕಿ ಉಳಿದಿರುವ (Pending) ಅರ್ಜಿಗಳ ಸಂಖ್ಯೆ ಎಷ್ಟು; ಜಿಲ್ಲಾವಾರು ವಿವರ ನೀಡುವುದು | ಪ್ರಸ್ತುತ ರಾಜ್ಯಾದ್ಯಂತ ತೈಲ ಕಂಪನಿಗಳಲ್ಲಿ (IOCL, BPCL, HPCL) ಹಾಗೂ ಸಾರ್ವಜನಿಕ ಪಡಿತರ/ಗ್ಯಾಸ್ ಏಜೆನ್ಸಿಗಳಲ್ಲಿ ಹೊಸ ಗ್ಯಾಸ್ ಸಂಪರ್ಕಕ್ಕಾಗಿ ಸಲ್ಲಿಸಿರುವ ವಿವರಗಳನ್ನು ಅನುಬಂಧ–01ರಲ್ಲಿ ಒದಗಿಸಲಾಗಿದೆ. |
| ಈ | ಗ್ಯಾಸ್ ಸಂಪರ್ಕ ಸಿಗದೆ ಗ್ರಾಮೀಣ ಹಾಗೂ ನಗರ ಪ್ರದೇಶದ ಸಾರ್ವಜನಿಕರು ಎದುರಿಸುತ್ತಿರುವ ತೊಂದರೆಗಳನ್ನು ನಿವಾರಿಸಲು ಹಾಗೂ ನಿಗಧಿತ ಕಾಲಮಿತಿಯೊಳಗೆ ಹೊಸ ಸಂಪರ್ಕಗಳನ್ನು ಮರು ಆರಂಭಿಸಿ ವಿತರಿಸಲು ಸರ್ಕಾರ ಕೇಂದ್ರ ಸರ್ಕಾರ/ತೈಲ ಸಂಸ್ಥೆಗಳೊಂದಿಗೆ ಕೈಗೊಂಡಿರುವ ಕ್ರಮಗಳೇನು; ಹೊಸ ಸಂಪರ್ಕಗಳನ್ನು ಯಾವ ಕಾಲಮಿತಿಯೊಳಗೆ ನೀಡಲಾಗುವುದು? | ಫೆಬ್ರುವರಿ-2026ರಲ್ಲಿ ಮಧ್ಯಪ್ರಾಚ್ಯದ ಬಿಕ್ಕಟ್ಟು ಪ್ರಾರಂಭವಾದ ನಂತರ LPG ಮತ್ತು ಹೊಸ ಸಂಪರ್ಕಗಳಿಗೆ ಅಗತ್ಯವಿರುವ ಉಪಕರಣಗಳ ಪೂರೈಕೆಯಲ್ಲಿ ಯಾವುದೇ ವ್ಯತ್ಯಯ ಉಂಟಾಗದಂತೆ ತೈಲ ಮಾರುಕಟ್ಟೆ ಕಂಪನಿಗಳು (OMC)ಗಳಿಗೆ ಈ ಕೆಳಕಂಡಂತೆ ಕ್ರಮಗಳನ್ನು ಕೈಗೊಳ್ಳಲು ಸೂಚಿಸಲಾಗಿರುತ್ತದೆ.<br>• ದೇಶೀಯ LPG ಉತ್ಪಾದಕರಿಗೆ LPG ಉತ್ಪಾದನೆಯನ್ನು ಗರಿಷ್ಠ ಮಟ್ಟಕ್ಕೆ ಹೆಚ್ಚಿಸುವಂತೆ ಸೂಚಿಸಲಾಗಿರುತ್ತದೆ.<br>• ತುರ್ತು ಅವಶ್ಯಕತೆ ಇರುವ ಹೊಸ ಗೃಹ ಬಳಕೆ ಗ್ರಾಹಕರಿಗೆ 05 kg Free Trade LPG (FTL)ಯನ್ನು ಗ್ಯಾಸ್ ಏಜೆನ್ಸಿಗಳ ಮುಖಾಂತರ ಖರೀದಿಸಲು ಅವಕಾಶ ಮಾಡಿಕೊಡಲಾಗಿರುತ್ತದೆ.<br>• ಬಿಕ್ಕಟ್ಟಿನ ಆರಂಭಿಕ ಹಂತದಲ್ಲಿ ಅಗತ್ಯ ಅಡುಗೆ ಅನಿಲದ ಬೇಡಿಕೆಯನ್ನು ಪೂರೈಸಲು ವಾಣಿಜ್ಯ/ಕೈಗಾರಿಕಾ ವಲಯಕ್ಕೆ LPG ಪೂರೈಕೆಯನ್ನು ನಿಯಂತ್ರಿಸಲಾಗಿತ್ತು. ಅಲ್ಲದೆ, ಪೆಟ್ರೋಕೆಮಿಕಲ್ ವಲಯದಿಂದ ಆದ್ಯತೆ ಮೇರೆಗೆ C3/C4 ಸ್ಟ್ರೀಮ್‌ಗಳನ್ನು ಗೃಹಬಳಕೆಯ ಎಲ್‌ಪಿಜಿ ಕಡೆಗೆ ಮರುನಿರ್ದೇಶಿಸಲಾಗಿರುತ್ತದೆ.<br>• LPG ವಿತರಣೆಯನ್ನು ನಿಯಂತ್ರಿಸಲು ಮತ್ತು ಎಲ್ಲರಿಗೂ ಸಮಾನವಾಗಿ LPG ಸಂಪರ್ಕ ಲಭ್ಯವಾಗುವಂತೆ ಮಾಡಲು ಅಗತ್ಯ ವಸ್ತುಗಳ ಕಾಯ್ದೆ,1955 (Essential Commodities Act, 1955)ರ ನಿಯಮಗಳನ್ನು ಜಾರಿಗೊಳಿಸಲಾಗಿರುತ್ತದೆ. |

| | | |
|---|---|---|
| | | • ಆತಂಕಕ್ಕೊಳಗಾಗಿ ಹೆಚ್ಚಿನ ಪ್ರಮಾಣದಲ್ಲಿ LPG ಬುಕ್ಕಿಂಗ್ ಮಾಡುವುದನ್ನು ತಡೆಯಲು, ಗೃಹಬಳಕೆಯ ಗ್ರಾಹಕರು ಎರಡು ಸತತ LPG ಸಿಲಿಂಡರ್ ಬುಕ್ಕಿಂಗ್‌ಗಳ ನಡುವೆ ಕನಿಷ್ಠ ಅವಧಿಯನ್ನು ಕಡ್ಡಾಯಗೊಳಿಸಲಾಗಿರುತ್ತದೆ.<br>• ಸಾಕಷ್ಟು LPG ಪೂರೈಕೆ ಲಭ್ಯವಿದೆ ಎಂದು ತೈಲ ಕಂಪನಿಯವರು ಗ್ರಾಹಕರಿಗೆ ತಿಳಿಸಿದ್ದಲ್ಲದೆ, ಆತಂಕಕ್ಕೊಳಗಾಗಿ ಹೆಚ್ಚಿನ ಬುಕ್ಕಿಂಗ್ ಮಾಡದಂತೆ ಹಾಗೂ ವದಂತಿಗಳಿಗೆ ಪ್ರತಿಕ್ರಿಯಿಸದಂತೆ ಗ್ರಾಹಕರಿಗೆ ಈಗಾಗಲೇ ಮಾಹಿತಿ ನೀಡಲಾಗಿರುತ್ತದೆ.<br>• LPG ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು PNG (Piped Natural Gas) ಮತ್ತು ವಿದ್ಯುತ್ ಆಧಾರಿತ ಅಡುಗೆ ಮುಂತಾದ ಪರ್ಯಾಯ ಇಂಧನಗಳಿಗೆ ಬದಲಾಗುವಂತೆ ಗ್ರಾಹಕರಿಗೆ ಪ್ರೋತ್ಸಾಹಿಸಲಾಗಿರುತ್ತದೆ.<br>• LPG ಸಿಲಿಂಡರ್‌ಗಳ ಅಕ್ರಮ ವರ್ಗಾವಣೆ ಮತ್ತು ದುರುಪಯೋಗವನ್ನು ತಡೆಯಲು ಕಟ್ಟುನಿಟ್ಟಿನ ಜಾರಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಇದರಿಂದ ನೈಜವಾಗಿ ಅಗತ್ಯವಿರುವ ಗ್ರಾಹಕರಿಗೆ LPGಯ ಲಭ್ಯವಾಗಬೇಕೆಂಬ ಉದ್ದೇಶವನ್ನು ಹೊಂದಲಾಗಿದೆ. |

**ಇ-ಆನಾಸ 70 ಎಫ್‌ಪಿಪಿ 2026**

(ರಿಜ್ವಾನ್ ಅರ್ಷದ್)
ಆಹಾರ, ನಾಗರಿಕ ಸರಬರಾಜು ಹಾಗೂ
ಗ್ರಾಹಕರ ವ್ಯವಹಾರಗಳ ಸಚಿವರು

409 (429)

| ಅನುಬಂಧ-1 (ತೈಲ ಕಂಪನಿಯಿಂದ ಸ್ವೀಕೃತಿಯಾದ ವರದಿ) | | | |
|---|---|---|---|
| Row Labels | **IOC** | **BPC** | **HPC** |
| BAGALKOT | 386 | 25 | 74 |
| BANGALORE | 2560 | 5206 | 3583 |
| BANGALORE RURAL | 134 | 959 | 202 |
| BELGAUM | 1573 | 47 | 482 |
| BELLARY | 348 | 90 | 143 |
| BIDAR | 243 | 171 | 112 |
| BIJAPUR - KAR | 533 | 147 | 557 |
| CHAMRAJNAGAR | 105 | 120 | 244 |
| CHIKKABALLAPURA | 247 | 531 | 167 |
| CHIKMAGALUR | 142 | 6 | 254 |
| CHITRADURGA | 130 | 556 | 112 |
| DAKSHIN KANNAD | 101 | 42 | 668 |
| DAVANGERE | 266 | 67 | 188 |
| DHARWAD | 1513 | 132 | 402 |
| GADAG | 366 | 26 | 35 |
| GULBARGA | 748 | 135 | 352 |
| HASSAN | 279 | 34 | 587 |
| HAVERI | 242 | 36 | 172 |
| KODAGU | 281 | 139 | 153 |
| KOLAR | 253 | 103 | 234 |
| KOPPAL | 237 | 90 | 157 |
| MANDYA | 193 | 263 | 415 |
| MYSORE | 529 | 432 | 758 |
| RAICHUR | 579 | 37 | 117 |
| RAMANAGARA | 111 | 259 | 162 |
| SHIMOGA | 102 | 77 | 244 |
| TUMKUR | 468 | 334 | 282 |
| UDUPI | 142 | 224 | 385 |
| UTTAR KANNAD | 358 | 129 | 187 |
| VIJAYANAGARA | 436 | 129 | 42 |
| YADGIR | 309 | 1 | 138 |
| **Grand Total** | **13914** | **10547** | **11608** |